ESTD : No. JRB/Cell.II/69/Regn-4876/77-78
Date : 09-12-1977
✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

THE BANGALORE CITY DIST. CO-OPERATIVE UNION LTD.,
' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
E-mail: bcdcu1977@gmail.com

**ಹೆಚ್.ಟಿ. ನಾಗೇಶ್** ಅಧ್ಯಕ್ಷರು | **ಚಾಮರಾಜು ಕೆ.ಎಸ್.** ಉಪಾಧ್ಯಕ್ಷರು | **ವೆಂಕಟೇಶ್ ಎಂ.** ಖಜಾಂಚಿ

## ಪ್ರಕಟಣೆಗಾಗಿ

## ರಾಜ್ಯ ಮೀಸಲು ಪೊಲೀಸ್‌ಅಧಿಕಾರಿ / ಸಿಬ್ಬಂದಿಗಳಿಗೆ ಸಹಕಾರ ತರಬೇತಿ ಕಾರ್ಯಾಗಾರ

ಬೆಂಗಳೂರು :- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ., ಬೆಂಗಳೂರು **ಕರ್ನಾಟಕ ರಾಜ್ಯ ಮೀಸಲು ಪೋಲಿಸ್ ಇಲಾಖಾ ಅಧಿಕಾರಿಗಳ / ನೌಕರರವಿವಿದೋದ್ದೇಶ ಸಹಕಾರ ಸಂಘ ನಿ., ಬೆಂಗಳೂರು** ದಿನಾಂಕ: 28-06-2024 ರಂದು **ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು, ಕಾರ್ಯದರ್ಶಿಗಳು ಮತ್ತು ಸದಸ್ಯರುಗಳಿಗೆ** ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಶುಕ್ರವಾರ ಕೆ.ಎಸ್.ಆರ್.ಪಿ. ವಸತಿ ಸಂಕೀರ್ಣ ಆವರಣ, ಕೋರಮಂಗಲ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.

ಸಮಾರಂಭದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಮೀಸಲು ಪೋಲೀಸ್ ಇಲಾಖಾ ಅಧಿಕಾರಿಗಳ ಹಾಗೂ ನೌಕರರ ವಿವಿದೋದ್ಧೇಶ ಸಹಕಾರ ಸಂಘದ ಅಧ್ಯಕ್ಷರಾದ ಕಮಾಂಡೆಂಟ್ ಕೆ.ಎಸ್. ರಘುನಾಥ್ ಇವರು ನೆರವೇರಿಸಿ ಮಾತನಾಡುತ್ತಾ ಪೋಲೀಸ್ ಅಧಿಕಾರಿಗಳು ಮತ್ತು ನೌಕರರ ಅವಶ್ಯಕತೆಗಳನ್ನು ಪೂರೈಸಲು ಸಹಕಾರ ತತ್ವದಡಿ ಪ್ರಾರಂಭವಾಗಿರುವ ರಾಜ್ಯ ಮೀಸಲು ಪೋಲೀಸ್ ವಿವಿದೋದ್ಧೇಶ ಸಹಕಾರ ಸಂಘ ಇಂದು ರಾಜ್ಯದಲ್ಲಿ ಯಶಸ್ವಿಯಾಗಿ ಮತ್ತು ಲಾಭದಲ್ಲಿ ಸಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಇಲಾಖಾ ಅಧಿಕಾರಿಗಳು ಒಂದು ದಿನದ ಜಿಲ್ಲಾ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮುಂದುವರೆದು ಮಾತನಾಡಿದ ಅವರು, ಪೊಲೀಸರು ಪೊಲೀಸರಿಗಾಗಿಯೇ ನಡೆಸಿಕೊಂಡು ಹೋಗುತ್ತಿರುವ ಈ ಸಹಕಾರ ಸಂಘದಲ್ಲಿ ಅನೇಕರಿಗೆ ಉದ್ಯೋಗವನ್ನು ಕೊಡಲಾಗಿದೆ. ಸದಸ್ಯರಿಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಸಂಘದಿಂದ ಕೊಡಲಾಗುತ್ತಿದೆ. ಜೊತೆಗೆ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಟಿ. ನಾಗೇಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಯಾರಿಗೆ ಸಹಕಾರ ಕ್ಷೇತ್ರ ಬಗ್ಗೆ ಅರಿವಿಲ್ಲವೋ ಅಂತಹವರಿಗೆ ಸಹಕಾರ ಶಿಕ್ಷಣ, ತರಬೇತಿಯನ್ನು ನೀಡುವುದು ಸಹಕಾರ ಮಹಾಮಂಡಳ ಹಾಗೂ ಜಿಲ್ಲಾ ಸಹಕಾರ ಯೂನಿಯನ್ನಿನ ಮೂಲಕ ಕರ್ತವ್ಯ. ವಿಶೇಷವಾಗಿ ಯುವಜನರಿಗೆ, ಮಹಿಳೆಯರಿಗೆ, ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರಿಗೆ, ಸದಸ್ಯರಿಗೆ ಹಲವಾರು ವಲಯಗಳಲ್ಲಿ ಸಹಕಾರ ಶಿಕ್ಷಣವನ್ನು ನೀಡುತ್ತಿದ್ದೇವೆ. ಇಂತಹ ತರಬೇತಿ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಸಲಹೆ ಮಾಡಿದರು.

....2

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ಫಾತಿಮಾ ಲಾರೆನ್ಸ್‌ರವರು ಸಹಕಾರ ತರಬೇತಿ ಕುರಿತು ಮಾತನಾಡಿದರು. ನಿರ್ದೇಶಕರಾದ ಶ್ರೀ ಜೆ. ಮಂಜುನಾಥ್ ಉಪಸ್ಥಿತರಿದ್ದರು. ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆ ಇವರು ಸಹಕಾರ ಇತಿಹಾಸ, ಸಹಕಾರ ತತ್ವಗಳು ಹಾಗೂ ಪಾಲನೆ ಮತ್ತು ಇತ್ತಿಚೀನ ಸಹಕಾರ ಕಾಯ್ದೆ ಕಾನೂನು ತಿದ್ದುಪಡಿಗಳ ಮುಖ್ಯಾಂಶಗಳ ಬಗ್ಗೆ ಉಪನ್ಯಾಸವನ್ನು ನೀಡಿದರು ನಂತರ ಮನಶಾಸ್ತ್ರಜ್ಞರು ಹಾಗೂ ರಾಜ್ಯ ತರಬೇತುದಾರರಾದ ಶ್ರೀ ಸಿ.ಸಿ. ಪಾವಟೆ ಇವರು ವ್ಯಕ್ತಿತ್ವ ವಿಕಸನ ಮತ್ತು ಮಾನಸಿಕ ಒತ್ತಡಗಳ ನಿರ್ವಹಣೆ ಕುರಿತು ಉಪನ್ಯಾಸವನ್ನು ನೀಡಿದರು. ಕರ್ನಾಟಕ ರಾಜ್ಯ ಮೀಸಲು ಪೋಲಿಸ್ ಇಲಾಖಾ ಅಧಿಕಾರಿಗಳ ಹಾಗೂ ನೌಕರರ ವಿವಿದೋದ್ಧೇಶ ಸಹಕಾರ ಸಂಘದ ಉಪಾಧ್ಯಕ್ಷರಾದ ಇನ್‌ಸ್ಪೆಕ್ಟರ್ ಶ್ರೀ ಜಿ.ಎನ್. ರುದ್ರೇಶ್ ಸ್ವಾಗತಿಸಿದರು. ನಿರ್ದೇಶಕರಾದ ಶ್ರೀಮತಿ ಶಿಲ್ಪಾ ಕಾರ್ಯಕ್ರಮ ನಿರೂಪಿಸಿದರು, ನಿರ್ದೇಶಕರಾದ ಅಸಿಸ್ಟೆಂಟ್ ಕಮಾಂಡೆಂಟ್‌ಗಳಾದ ಶ್ರೀ ಚಂದ್ರಶೇಖರ್, ಶ್ರೀ ಸಿದ್ದಪ್ಪ ಕೋಡ್ಲಿವಾಡ್ ಉಪಸ್ಥಿತರಿದ್ದರು. ಕೊನೆಯಲ್ಲಿ ಸಂಘದ ಕಾರ್ಯದರ್ಶಿ ಹಾಗೂ ಇನ್‌ಸ್ಪೆಕ್ಟರ್‌ರಾದ ಶ್ರೀ ಜಿ. ಪ್ರಮೋದ್‌ಕುಮಾರ್ ವಂದಿಸಿದರು.

ಮುಖ್ಯಕಾರ್ಯನಿರ್ವಹಣಾಧಿಕಾರಿ.

